

بِسْمِ اللهِ الرَّحْمٰنِ الرَّحِيمِ

# ಮುಹಮ್ಮದ್ ಒಸ್ಮಾನ್ ಚೌ ಚೇನಿ ಸಾಹಿಬ್

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ **27–04–2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕೆಲವು ದಿನಗಳ ಹಿಂದೆ ನಮ್ಮ ಜಮಾಅತಿನ ಒಬ್ಬ ಹಿರಿಯರೂ ವಿದ್ವಾಂಸರೂ ಆಗಿದ್ದ ಮುಕ್ರಮ್ ಉಸ್ಮಾನ್ ಚೇನೀ ಸಾಹಿಬರು ನಿಧನ ಹೊಂದಿದರು. ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಅವರನ್ನು ಅಲ್ಲಾಹನು ಚೀನದ ಒಂದು ದೂರ ಪ್ರದೇಶದಿಂದ ತನ್ನ ವಿಶಿಷ್ಟ ವಿಧಿ ಪ್ರಕಾರ ಹೊರಗೆ ತಂದು ಪಾಕಿಸ್ಥಾನಕ್ಕೆ ಬಂದು ಅಹ್ಮದಿಯ್ಯತ್ ಸ್ವೀಕರಿಸುವ ಭಾಗ್ಯವನ್ನು ನೀಡಿದನು. ಅವರ ಜೀವಿತದ ಘಟನೆಗಳು, ಅವರು ಜಮಾಅತ್‌ಗೆ ಸಲ್ಲಿಸಿದ ಸೇವೆ, ಅವರ ಸ್ವಭಾವಗುಣ ಮೊದಲಾದುವುಗಳ ಬಗ್ಗೆ ಎಷ್ಟು ಮಾಹಿತಿಗಳಿವೆ ಎಂದರೆ ಒಂದು ಪುಸ್ತಕವನ್ನೇ ಬರೆಯಬಹುದಾಗಿದೆ. ಇಂದು ನಾನು ದರ್ವೇಶ್ ಗುಣದ, ಜಮಾಅತಿನ ಒಬ್ಬ ಹಿರಿಯ ವಾಕಿಫೆ ಝಿಂದಗಿಯ, ಮುಬಲ್ಲಿಗ್ ಆಗಿದ್ದ, ಕರ್ಮಾನುಷ್ಠಾನ ಬದ್ಧರಾಗಿದ್ದ ಹಾಗೂ ಅಲ್ಲಾಹನ ವಲಿಯಾಗಿದ್ದ ಆ ವ್ಯಕ್ತಿಯ ಬಗ್ಗೆ ಸ್ವಲ್ಪ ವಿವರಿಸುವೆನು. ಅವರು ವಾಕಿಫೀನೆ ಝಿಂದಗಿ ವ್ಯಕ್ತಿಗಳಿಗೆ ಅನುಕರಣೀಯ ಮಾದರಿಯಾಗಿದ್ದರು. ಅವರು ಉಸ್ಮಾನ್ ಚೇನೀ ಎಂದು ಅಹ್ಮದಿಯರಲ್ಲಿ ಪ್ರಸಿದ್ಧರಾಗಿದ್ದರು. ಅವರ ಪೂರ್ಣ ಹೆಸರು ಮುಹಮ್ಮದ್ ಉಸ್ಮಾನ್ ಚೌ ಚಿಂಗ್ ಶಿ ಎಂದಾಗಿತ್ತು. 2018 ಎಪ್ರಿಲ್ ದಿನಾಂಕ 13ರಂದು ಅವರು ನಿಧನ ಹೊಂದಿದರು. 1925 ಡಿಸೆಂಬರ್ ದಿನಾಂಕ 13ರಂದು ಒಂದು ಮುಸ್ಲಿಮ್ ಕುಟುಂಬದಲ್ಲಿ ಅವರು ಜನಿಸಿದರು, ಚೀನದ ಆನ್‌ಖೂಯಿ ಪ್ರಾಂತ್ಯದಲ್ಲಿ. ಹೈಸ್ಕೂಲ್ ವಿದ್ಯಾಭ್ಯಾಸದ ನಂತರ 1946ರಲ್ಲಿ ಅವರು ನಾನ್‌ಚಿಂಗ್ ಯುನಿವರ್ಸಿಟಿಯಲ್ಲಿ ಪೊಲಿಟಿಕ್ಸ್ ವಿಭಾಗದಲ್ಲಿ ವಿದ್ಯಾಭ್ಯಾಸ ಮುಂದುವರಿಸಿದರು. ಆದರೆ ಪೊಲಿಟಿಕ್ಸ್ (ರಾಜಕೀಯ ಶಾಸ್ತ್ರ) ಬಗ್ಗೆ ಆಸಕ್ತಿ ಇಲ್ಲದ ಕಾರಣ ನ್ಯಾಯಶಾಸ್ತ್ರ, ಫಿಲಾಸಫಿ, ಅಥವಾ ಧಾರ್ಮಿಕ ಶಾಸ್ತ್ರ ಕಲಿಯುವ ಬಗ್ಗೆ ಯೋಚಿಸಿದರು. ಮೊದಲು ತುರ್ಕಿ ದೇಶಕ್ಕೆ ಹೋಗಿ ವಿದ್ಯಾಭ್ಯಾಸ ಪಡೆಯುವ ಬಗ್ಗೆ ಯೋಚಿಸಿದ್ದರು. 1949ರಲ್ಲಿ ಅವರು ಪಾಕಿಸ್ಥಾನಕ್ಕೆ ಆಗಮಿಸಿದರು. ಅವರು ಸ್ವತಃ ಸಂಶೋಧನೆ ನಡೆಸಿ ಬೈಅತ್ ಮಾಡಿದರು. ಅವರು ಜಾಮಿಅ ಅಹ್ಮದಿಯಾದಲ್ಲಿ ಧಾರ್ಮಿಕ ವಿದ್ಯಾಭ್ಯಾಸ ಪ್ರಾರಂಭಿಸಿದರು. 1957ರಲ್ಲಿ ಜಾಮಿಅ ಅಹ್ಮದಿಯಾದಲ್ಲಿ ಶಹಾದತುಲ್ ಅಜಾಯಿಬ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಅದು ಮುಬಲ್ಲಿಗರ ಶೋರ್ಟ್ ಕೋರ್ಸ್ ಆಗಿತ್ತು. 1959ರಲ್ಲಿ ಅವರು ವಕ್ಫ್ ಮಾಡಿದರು. 1960 ಜನವರಿಯಲ್ಲಿ ಅವರು ಮುಬಲ್ಲಿಗರಾಗಿ ನೇಮಿಸಲ್ಪಟ್ಟರು. ನಂತರ ಮುಬಲ್ಲಿಗರ ಕೋರ್ಸ್ ಕಲಿತು ತೇರ್ಗಡೆ ಹೊಂದಲು 1961 ಎಪ್ರಿಲ್‌ನಲ್ಲಿ ಜಾಮಿಅ ಅಹ್ಮದಿಯಾವನ್ನು ಪುನಃ ಪ್ರವೇಶಿಸಿದರು. 1964ರಲ್ಲಿ ‘ಶಾಹಿದ್’ ಬಿರುದು ಪಡೆದರು. ಕರಾಚಿ ಮತ್ತು ರಬ್ವದಲ್ಲಿ ಅವರು ವಾಕಿಫೆ ಝಿಂದಗಿ ಮತ್ತು ಮುರಬ್ಬಿಯಾಗಿ ಸೇವೆ ಸಲ್ಲಿಸಿದರು. 1966ರಲ್ಲಿ ಅವರು ಸಿಂಗಾಪುರ ಮತ್ತು ಮಲೇಶಿಯಾಗಳಿಗೆ ಹೋದರು. ಅವರು ಅಂದಾಜು ಮೂರುವರೆ ವರ್ಷಕಾಲ ಸಿಂಗಾಪುರದಲ್ಲಿಯೂ ನಾಲ್ಕು ತಿಂಗಳಷ್ಟು ಕಾಲ ಮಲೇಶಿಯಾದಲ್ಲಿಯೂ ಜಮಾಅತ್‌ಗೆ ಸೇವೆ ಸಲ್ಲಿಸಿದರು. 1970ರಲ್ಲಿ ಅವರು ಪಾಕಿಸ್ಥಾನಕ್ಕೆ ಮರಳಿ ಬಂದು ವಿವಿಧ ಸ್ಥಳಗಳಲ್ಲಿ ಮುರಬ್ಬಿಯಾಗಿ ಕೆಲಸ ಮಾಡಿದರು. ಹಜ್ ಮತ್ತು ಉಮ್ರ ಮಾಡುವ ಭಾಗ್ಯ ಸಹ ಅವರಿಗೆ ದೊರೆತಿತ್ತು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರವರ ಹಿಜ್ರತ್ ನಂತರ ಇಲ್ಲಿ ವಿವಿಧ ಭಾಷಾ ವಿಭಾಗಗಳ ಕಚೇರಿ ಪ್ರಾರಂಭವಾದಾಗ, ಜಮಾಅತಿನ ಚಟುವಟಿಕೆಗಳು ವಿಶಾಲಗೊಂಡಾಗ, ಜಮಾಅತಿನ ಸಾಹಿತ್ಯವನ್ನು ಭಾಷಾಂತರ ಮಾಡುವ ಬಗ್ಗೆ ಹೆಚ್ಚು ವಿಶಾಲತೆ ಉಂಟಾದಾಗ ಚೇನಾ ಡೆಸ್ಕ್ ಎಂಬ ಚೇನೀ ಭಾಷಾ ವಿಭಾಗ ಸಹ ಸ್ಥಾಪಿತವಾಯಿತು. ಆಗ ಉಸ್ಮಾನ್ ಚೇನೀ ಸಾಹಿಬರನ್ನು ಇಲ್ಲಿಗೆ ಕರೆಯಿಸಲಾಯಿತು. ಅವರಿಗೆ ಜಮಾಅತಿನ ಗ್ರಂಥಗಳನ್ನು ಚೇನೀ ಭಾಷೆಗೆ ಭಾಷಾಂತರ ಮಾಡುವ ಭಾಗ್ಯ ಲಭಿಸಿತು. ಅವುಗಳಲ್ಲಿ ಪವಿತ್ರ ಖುರ್‌ಆನಿನ ಚೇನೀ ಭಾಷೆಯ ಭಾಷಾಂತರ ವಿಶಿಷ್ಟವಾಗಿ ಪ್ರಸ್ತಾಪಿಸಲು ಅರ್ಹವಾಗಿದೆ. ಜಮಾಅತಿನ ವಿಶ್ವಾಸ ಮತ್ತು ಉಪದೇಶಗಳ ಬಗ್ಗೆ ಸಹ ಅವರು ಗ್ರಂಥಗಳನ್ನು ರಚಿಸಿದ್ದರು.

ಅವರು ಪತ್ನಿಯನ್ನೂ ಒಬ್ಬ ಪುತ್ರನನ್ನೂ ಇಬ್ಬರು ಪುತ್ರಿಯರನ್ನೂ ಅಗಲಿ ಹೋಗಿದ್ದಾರೆ. ಪವಿತ್ರ ಖುರ್‌ಆನಿನ ಚೇನೀ ಭಾಷಾಂತರದ ಬಗ್ಗೆ ಹೇಳುವುದಾದರೆ, ಉಸ್ಮಾನ್ ಚೇನೀ ಸಾಹಿಬರು ಹೀಗೆ ಹೇಳಿದ್ದರು– ಪವಿತ್ರ ಖುರ್‌ಆನ್ ಚೇನೀ ಭಾಷಾಂತರದ ಪ್ರಕಟಣೆಯ ನಂತರ ಚೇನದಿಂದಲೂ ಇತರ ದೇಶಗಳಿಂದಲೂ ಅಸಂಖ್ಯಾತ ವಿಮರ್ಶೆಗಳು ಲಭಿಸಿದ್ದುವು. ಭಾಷಾಂತರವು ಅತ್ಯುತ್ತಮವೆಂದು ಹೇಳಿ ಬಹಳ ಪ್ರಶಂಸಿಸಲಾಗಿತ್ತು. ನಮ್ಮ ಜಮಾಅತ್ ಪ್ರಕಟಿಸಿದ ಭಾಷಾಂತರ ಬಹಳ ಜನಪ್ರಿಯವಾಗಿದೆ. ಬಹಳಷ್ಟು ಬೇಡಿಕೆ ಸಹ ಇದೆ. ಭಾಷಾಂತರದ ಗುಣಮಟ್ಟ ಬಹಳ ಉನ್ನತವಾಗಿದೆ ಎಂದು ಪ್ರತಿಯೊಬ್ಬರು ಅಭಿಪ್ರಾಯ ಸೂಚಿಸಿದ್ದರು. ಚೇನೀ ಸಾಹಿಬರು ತಮ್ಮ ಮೇಲ್ವಿಚಾರಣೆಯಲ್ಲಿ ಸಿದ್ಧಪಡಿಸಿದ ಚೇನೀ ಸಾಹಿತ್ಯದಲ್ಲಿ ಏಳು ಗ್ರಂಥಗಳು ಸ್ವತಃ ಅವರೇ ಬರೆದುದಾಗಿದೆ. ಅವರು ಅಂದಾಜು ಮೂವತ್ತೈದು ಗ್ರಂಥಗಳನ್ನು ಭಾಷಾಂತರಿಸಿದರು ಮತ್ತು ತಮ್ಮ ಮೇಲ್ನೋಟದಲ್ಲಿ ಭಾಷಾಂತರ ಮಾಡಿಸಿದರು.

ಕುಟುಂಬ ಜೀವಿತದ ಬಗ್ಗೆ ಅವರ ಪತ್ನಿ ಬರೆಯುತ್ತಾರೆ: ಪಾಕಿಸ್ಥಾನದಿಂದ ಉಸ್ಮಾನ್ ಸಾಹಿಬರ ಕಡೆಯಿಂದ ವಿವಾಹದ ಪ್ರಸ್ತಾಪ ಲಭಿಸಿದಾಗ ವಯಸ್ಸಿನ ವ್ಯತ್ಯಾಸದ ಕಾರಣ ನನ್ನ ತಂದೆಯವರು ವಿವಾಹದ ಬಗ್ಗೆ ಸಮ್ಮತಿ ಸೂಚಿಸಲಿಲ್ಲ. (ಉಸ್ಮಾನ್ ಚೇನೀಯವರ ಪತ್ನಿ ಸಹ ಚೇನೀ ಆಗಿದ್ದಾರೆ.) ಆಗ ನನ್ನ ಪ್ರಾಯ ಇಪ್ಪತ್ತು ಮತ್ತು ಉಸ್ಮಾನ್ ಸಾಹಿಬರ ಪ್ರಾಯ ಐವತ್ತು ಆಗಿತ್ತು. ಅನೇಕ ತಿಂಗಳುಗಳ ಕಾಲ ನನ್ನ

ತಂದೆಯವರು ಈ ವಿವಾಹ ಪ್ರಸ್ತಾಪದ ಬಗ್ಗೆ ನನ್ನೊಂದಿಗೆ ಹೇಳಿರಲಿಲ್ಲ. ಕೊನೆಗೆ ಒಂದು ದಿನ ವಿವಾಹ ಪ್ರಸ್ತಾಪದ ಪತ್ರವನ್ನು ನನ್ನ ಮುಂದೆ ಇರಿಸಿ ನಾನು ನಿರ್ಧಾರ ಮಾಡಲು ಹೇಳಿದರು. ನಾನೊಂದು ಸ್ವಪ್ನ ಕಂಡಿದ್ದೆ. ನಾನು ವಿದೇಶದಲ್ಲಿ ಒಂದು ದೊಡ್ಡ ಮೈದಾನದಲ್ಲಿ ಬರಿಗೈಯ್ಯಲ್ಲಿ ನಿಂತಿದ್ದೆ. ನನಗೇನಾಗುವುದು ಎಂದು ನಾನು ಯೋಚಿಸುತ್ತಿದ್ದೆ. ಆಗ ನಾನು ಬಿಳಿ ಬಟ್ಟೆ ಧರಿಸಿದ ಒಬ್ಬರು ಸ್ವಲ್ಪ ದೂರದಲ್ಲಿ ನಿಂತಿರುವುದಾಗಿ ಕಂಡೆನು. ಆಗ ಒಂದು ಶಬ್ದ ಕೇಳಿಸಿತು. ನಿನ್ನ ಎಲ್ಲಾ ಆವಶ್ಯಕತೆಗಳು ಈ ವ್ಯಕ್ತಿಯ ಮೂಲಕ ಈಡೇರುವುದು ಎಂದು. ಆ ಪತ್ರ ನೋಡಿದ ನಂತರ ನಾನು ಉಸ್ಮಾನ್ ಸಾಹಿಬರನ್ನು ಸ್ವಪ್ನದಲ್ಲಿ ಕಂಡೆನು. ಅವರು ಬಿಳಿ ಬಟ್ಟೆ ಧರಿಸಿ ನನ್ನ ಸಮೀಪ ನಿಂತಿದ್ದರು. ಅನಂತರ ನನಗೆ ಉಸ್ಮಾನ್ ಸಾಹಿಬರ ಫೋಟೋ ತೋರಿಸಿದಾಗ ನಾನು ಕನಸಿನಲ್ಲಿ ಕಂಡ ವ್ಯಕ್ತಿ ಅವರೇ ಎಂದು ನನಗೆ ತಿಳಿಯಿತು. ಈ ರೀತಿ ನಾನು ಈ ಸಂಬಂಧಕ್ಕೆ ಒಪ್ಪಿಗೆ ಸೂಚಿಸಿದೆ.

ಅವರ ಪತ್ನಿ ಬರೆಯುತ್ತಾರೆ: ಅವರು ಉತ್ತಮ ಪತಿಯೂ ನನ್ನ ಆಧ್ಯಾತ್ಮಿಕ ಗುರುಗಳೂ ಆಗಿದ್ದರು. ನಾನು ಪಾಕಿಸ್ಥಾನಕ್ಕೆ ಆಗಮಿಸಿದಾಗ ಅವರು ನನಗೆ ಮೊತ್ತ ಮೊದಲು ನಮಾಝ್ ಅನುಷ್ಠಿಸುವುದನ್ನು ಕಲಿಸಿದರು. ಅವರು ಮಸ್‌ಜಿದ್‌ನಲ್ಲಿ ನಮಾಝ್‌ಗೆ ನೇತೃತ್ವ ವಹಿಸಿದ ನಂತರ ಮನೆಗೆ ಮರಳಿ ಬಂದು ನನಗೆ ಬಾಜಮಾಅತ್ ನಮಾಝ್ ಮಾಡಲು ಕಲಿಸುತ್ತಿದ್ದರು. ಅವರು ನಮಾಝಿನ ಅರಬಿ ಶಬ್ದಗಳನ್ನು ಕಲಿಸಲು ಅನೇಕ ಗಂಟೆಗಳನ್ನು ವಿನಿಯೋಗಿಸುತ್ತಿದ್ದರು. ಅವರು ನನಗೆ ಶಬ್ದ ಪ್ರತಿ ಶಬ್ದ, ವಾಕ್ಯ ಪ್ರತಿ ವಾಕ್ಯ ಕಲಿಸಿದರು. ಅವುಗಳ ಅಭ್ಯಾಸ ಮಾಡಬೇಕೆಂದು ಉಪದೇಶಿಸುತ್ತಿದ್ದರು. ಏನಾದರೂ ಮರೆತರೆ ದುಆದ ಪುಸ್ತಕದಿಂದ ದುಆ ಆಯ್ಕೆ ಮಾಡಿ ಪ್ರಾರ್ಥಿಸಲು ಹೇಳುತ್ತಿದ್ದರು. ಅವರು ಆರು ತಿಂಗಳೊಳಗೆ ನನಗೆ ಪವಿತ್ರ ಖುರ್‌ಆನ್ ಓದಲು ಕಲಿಸಿದರು. ಪವಿತ್ರ ಖುರ್‌ಆನ್ ಓದಲು ಕಲಿಸುವಾಗ ಅದರೊಂದಿಗೆ ಭಾಷಾಂತರ ಸಹ ಕಲಿಸಿದರು. ಈ ರೀತಿ ನನ್ನ ಆಸಕ್ತಿ ನೆಲೆನಿಲ್ಲುವಂತೆ ಮಾಡಿದರು. ಅವರು ಬಹಳ ಸಹನೆ ದೋರುವವರಾಗಿದ್ದರು. ಅವರು ವಿಷಯಗಳನ್ನು ಬಹಳ ತಳಸ್ಪರ್ಶಿಯಾಗಿ ಮನವರಿಕೆ ಮಾಡಿಕೊಡುವವರಾಗಿದ್ದರು. ದೀರ್ಘವಾದ ಉದಾಹರಣೆ ನೀಡಿ ವಿಶದೀಕರಿಸುತ್ತಿದ್ದರು. ಅವರು ಕುಟುಂಬ ಸಂಬಂಧದ ಬಗ್ಗೆ ನಿಷ್ಠೆಯುಳ್ಳವರಾಗಿದ್ದರು. ಅವರು ತಮ್ಮ ಮಾತೆಯನ್ನು ಚೀನದಿಂದ ಪಾಕಿಸ್ಥಾನಕ್ಕೆ ಕರೆಯಿಸಿ ಧಾರಾಳವಾಗಿ ಅವರ ಸೇವೆ ಮಾಡಿದರು. ಅವರಿಗೆ ತಮ್ಮ ಜೀವಿತಕಾಲವಿಡೀ ತಮ್ಮ ಕೆಲಸದ ಬಗ್ಗೆ ನಿಷ್ಠೆ ಇತ್ತು. ಅವರ ಆರೋಗ್ಯ ಚೆನ್ನಾಗಿದ್ದಾಗ ಅವರು ಬಹುತೇಕ ರಾತ್ರಿಗಳಲ್ಲಿ ದೀರ್ಘಕಾಲ ತಮ್ಮ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಕೆಲವು ಸಲ ಕೆಲಸ ಮಾಡುತ್ತಾ ಬೆಳಗಾಗುತ್ತಿತ್ತು. ಮಕ್ಕಳಿಗೆ ಉತ್ತಮ ತರಬೇತಿ ನೀಡುವುದು ಮನೆಯಲ್ಲಿ ಅವರ ಮುಖ್ಯ ಕೆಲಸವಾಗಿತ್ತು. ಅವರಿಗೆ ಚಿಕ್ಕಪುಟ್ಟ ಲೌಕಿಕ ಕೆಲಸಗಳ ಬಗ್ಗೆ ಆಸಕ್ತಿ ಇರಲಿಲ್ಲ. ಆಹಾರದ ಬಗ್ಗೆ ಮತ್ತು ಬಟ್ಟೆಗಳ ಬಗ್ಗೆ ಬಹಳ ಸರಳತೆಯಿಂದ ವರ್ತಿಸುತ್ತಿದ್ದರು.

ಅವರ ಹಿರಿಯ ಪುತ್ರಿ ಡಾಕ್ಟರ್ ಖುರ್ರತುಲ್ ಐನ್ ಬರೆಯುತ್ತಾರೆ: ನನ್ನ ತಂದೆಯವರ ಕೆಲವು ವೈಶಿಷ್ಟ್ಯಗಳನ್ನು ಶಬ್ದಗಳಲ್ಲಿ ಬರೆಯುವುದು ನನಗೆ ಕಷ್ಟವಾಗುತ್ತಿದೆ. ಅವರು ಅತ್ಯಂತ ವಾತ್ಸಲ್ಯಮಯ, ಅನುಕಂಪ ಭರಿತ, ಅತ್ಯಂತ ಪರಿಶ್ರಮ ಮಾಡುವ, ಯಾವಾಗಲೂ ಶುಭ ಪ್ರತೀಕ್ಷೆ ಹೊಂದಿದ, ವಿನಯವಂತ ಮನುಷ್ಯನಾಗಿದ್ದರು. ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ ನಾವು ಸಹೋದರ ಸಹೋದರಿಯರು ಮತ್ತು ಅವರ ಅಳಿಯಂದಿರು ಚರ್ಚೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುತ್ತಿದ್ದರು. ನಮ್ಮ ಶಾಲೆಯ ವಿದ್ಯಾಭ್ಯಾಸದ ಬಗ್ಗೆ ಲಕ್ಷ್ಯ ನೀಡುವವರಾಗಿದ್ದರು. ಟೀಚರ್‌ಗಳು ಏನು ಹೇಳಿದರೆಂದು ತಿಳಿಯಲು ಬಯಸುತ್ತಿದ್ದರು. ಅವರು ನಮ್ಮೊಂದಿಗೆ ಹೇಳುತ್ತಿದ್ದರು: ನಿಮ್ಮ ಜೀವಿತದ ಉದ್ದೇಶಲಕ್ಷ್ಯ ತಬ್ಲೀಗ್ ಮಾಡುವುದಾಗಿರಬೇಕು, ವಿಶಿಷ್ಟವಾಗಿ ಚೀನೀ ಜನರಿಗೆ ತಬ್ಲೀಗ್ ಮಾಡಬೇಕು. ಆಧ್ಯಾತ್ಮಿಕ ಪ್ರಗತಿ, ಸುಸ್ವಭಾವ ಮತ್ತು ಜ್ಞಾನಾರ್ಜನೆಯಲ್ಲಿ ಅಭಿವೃದ್ಧಿಗೆ ಪ್ರಯತ್ನಿಸಿರಿ ಎಂದು ಅವರು ನಮಗೆ ಯಾವಾಗಲೂ ಉಪದೇಶಿಸುತ್ತಿದ್ದರು. ಅವರು ಹೀಗೆ ಸಹ ಹೇಳುತ್ತಿದ್ದರು: ನಿಮ್ಮ ವ್ಯಕ್ತಿತ್ವ, ಕರ್ಮ ಮತ್ತು ಅನ್ಯರೊಂದಿಗೆ ವರ್ತನೆಯನ್ನು ನೋಡಿ ಸೃಷ್ಟಿಕರ್ತನ ಅಸ್ತಿತ್ವವಿದೆ ಎಂಬ ಭಾವನೆ ಜನರಲ್ಲಿ ಉಂಟಾಗಬೇಕು. ಏಕೆಂದರೆ ಅಲ್ಲಾಹನ ಅಸ್ತಿತ್ವದಲ್ಲಿ ದೃಢ ವಿಶ್ವಾಸ ಹೊಂದಿರುವ ಮಕ್ಕಳು ಅಂತಹ ದೃಢ ವಿಶ್ವಾಸವಿಲ್ಲದ ಮಕ್ಕಳಿಗಿಂತ ಉತ್ತಮ ಮಟ್ಟದಲ್ಲಿರುತ್ತಾರೆ. ಅವರು ಹೀಗೆ ಸಹ ಹೇಳುತ್ತಿದ್ದರು, ನೀವು ಪ್ರಾರಂಭಿಸುವ ಪ್ರತಿಯೊಂದು ಕೆಲಸದಲ್ಲಿ ಕ್ರಮಬದ್ಧತೆ ಇರಬೇಕು. ಅವರು ನಮ್ಮನ್ನು ನಮ್ಮ ಬಾಲ್ಯಕಾಲದಲ್ಲಿ ಎಂದೂ ಆಕ್ಷೇಪಿಸಿ ಮಾತನಾಡುತ್ತಿರಲಿಲ್ಲ. ಯಾವಾಗಲೂ ಪ್ರೀತಿಯಿಂದ ಮನವರಿಕೆ ಮಾಡಿಕೊಡುತ್ತಿದ್ದರು. ಎಂದಾದರೂ ನಮ್ಮೊಂದಿಗೆ ಕಠಿಣವಾಗಿ ವರ್ತಿಸಿದ್ದರೆ ಅದು ನಮಾಝ್‌ಗೆ ಸಂಬಂಧಿಸಿಯಾಗಿತ್ತು. ನಮಾಝನ್ನು ಕ್ರಮಬದ್ಧವಾಗಿ ಅನುಷ್ಠಿಸಿರಿ ಎಂದು ಅವರು ಹೇಳುತ್ತಿದ್ದರು. ರಜೆಯ ಕಾಲದಲ್ಲಿ ಅವರು ನಮಗೆ ಓದಲು ಯಾವುದಾದರೊಂದು ಪುಸ್ತಕ ಕೊಡುತ್ತಿದ್ದರು. ಅನಂತರ ಅದರ ಬಗ್ಗೆ ನಮ್ಮ ಪರೀಕ್ಷೆ ನಡೆಸುತ್ತಿದ್ದರು. ಅವರು ನನಗೆ ಕಿಶ್ತಿನೂಹ್ ಗ್ರಂಥದ ಒಂದು ಹಳೆಯ ಪ್ರತಿ ಓದಲು ನೀಡಿದರು. ಇದು ನಾನು ಜಾಮಿಅದ ವಿದ್ಯಾರ್ಥಿಯಾಗಿದ್ದಾಗ ಓದಿದ ಪ್ರತಿಯಾಗಿದೆ ಎಂದು ಹೇಳಿದರು. ಅವರು ಯಾವಾಗಲೂ ಹೇಳುತ್ತಿದ್ದರು: ನೀವು ಚಂದ್ರನನ್ನು ಗಳಿಸಲು ಪ್ರಯತ್ನಿಸಬೇಕು. ಚಂದ್ರ ಸಿಗದಿದ್ದರೆ ನಕ್ಷತ್ರಗಳಾದರೂ ಸಿಗುವುದು ಎಂದು. ನೀವು ಯಾವಾಗಲೂ ಉನ್ನತವಾದ ಉದ್ದೇಶಲಕ್ಷ್ಯವನ್ನು ಇರಿಸಿಕೊಳ್ಳಿರಿ ಎಂಬುದು ಅದರ ಅರ್ಥವಾಗಿತ್ತು. ಐದು ಹೊತ್ತಿನ ಬಾಜಮಾಅತ್ ನಮಾಝ್ ನಿರ್ವಹಿಸಲು ಉತ್ತೇಜಿಸುತ್ತಿದ್ದರಲ್ಲದೆ ತಹಜ್ಜುದ್ ಬಗ್ಗೆ ಸಹ ಪ್ರೋತ್ಸಾಹಿಸುತ್ತಿದ್ದರು. ನೀರಿನ ಹನಿಗಳನ್ನು ಚಿಮುಕಿಸಿ ಫಜರ್ ನಮಾಝ್‌ಗೆ ಎಬ್ಬಿಸುತ್ತಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮತ್ತು ಖಲೀಫರ ಗ್ರಂಥಗಳನ್ನು ಓದುವ ಬಗ್ಗೆ ಗಮನ ಹರಿಸುತ್ತಿದ್ದರು. ಅವರು ಗಂಟೆಗಟ್ಟಲೆ ಕುಳಿತುಕೊಂಡು ಸಹನೆಯಿಂದ ನಮ್ಮ ಪ್ರಶ್ನೆಗಳಿಗೆ ಉತ್ತರ ನೀಡುತ್ತಿದ್ದರು. ಅವರು ಸಣ್ಣಪುಟ್ಟ ವಿಷಯಗಳಿಗೆ

ಸಂಬಂಧಿಸಿ ಬೇಸರ ಸೂಚಿಸುವವರಾಗಿರಲಿಲ್ಲ. ಅವರು ಯಾವಾಗಲೂ ಹೇಳುತ್ತಿದ್ದರು, ನಿಮಗೆ ಅಲ್ಲಾಹನು ನೀಡಿದ ಶಕ್ತಿಸಾಮರ್ಥ್ಯಗಳನ್ನು ಸದುಪಯೋಗಪಡಿಸಿರಿ. ಅದನ್ನು ವ್ಯರ್ಥಮಾಡಬೇಡಿರಿ ಎಂದು. ನೀವು ಮಾಡುವ ಪ್ರತಿಯೊಂದು ಕೆಲಸ ಅಲ್ಲಾಹನನ್ನು ಆರಾಧಿಸುವ ಸಂಕಲ್ಪದೊಂದಿಗೆ ಮಾಡಬೇಕು ಎಂದು ಹೇಳುತ್ತಿದ್ದರು. ಆಧ್ಯಾತ್ಮಿಕ ಅಭಿವೃದ್ಧಿಯ ಉದಾಹರಣೆಯನ್ನು ಅವರು ಮೇಲೆ ಹತ್ತುವ ಮೆಟ್ಟಿಲುಗಳಿಗೆ ಹೋಲಿಸಿ ಹೇಳುತ್ತಿದ್ದರು. ಒಮ್ಮೊಮ್ಮೆ ಅದರಲ್ಲಿ ಸ್ಥಗಿತತೆ ಉಂಟಾಗಬಹುದು. ಆದರೆ ಅನಂತರ ಇನ್ನಷ್ಟು ಎತ್ತರಕ್ಕೆ ಹೆಜ್ಜೆ ಹಾಕಲಾಗುತ್ತದೆ. ಅವರು ನಮಗೆ ಸರಳತೆ, ವಿನಯ ಮತ್ತು ಅನ್ಯರಿಗೆ ಆದ್ಯತೆ ನೀಡುವ ಬಗ್ಗೆ ಕಲಿಸಿದರು.

ಉಸ್ಮಾನ್ ಸಾಹಿಬರ ಪುತ್ರ ಡಾಕ್ಟರ್ ದಾಊದ್ ಸಾಹಿಬ್ ಹೇಳುತ್ತಾರೆ: ನನ್ನ ತಂದೆಯವರು ನನ್ನೊಂದಿಗೆ ಹೇಳಿದರು– ಜಾಮಿಅದ ವಿದ್ಯಾಭ್ಯಾಸದ ಕಾಲದಲ್ಲಿ ಅವರ ಅಣ್ಣ ಮತ್ತು ಪಿತ ಮೃತರಾದ ಸಮಾಚಾರ ತಂತಿ ಮೂಲಕ ಲಭಿಸಿದಾಗ ಅವರು ಜಾಮಿಅದ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿದ್ದರು. ಅವರು ಯೋಚಿಸಿದರು, ಈ ದುಃಖವಾರ್ತೆಗಳು ಜಾಮಿಅದ ಪರೀಕ್ಷೆಗಳ ಹಾಗೆ ಅಲ್ಲಾಹನ ಕಡೆಯಿಂದ ಒಂದು ಪರೀಕ್ಷೆ ಆಗಿದೆ. ಹಾಗೆ ಯೋಚಿಸಿ ಅವರು ಪರೀಕ್ಷೆಗೆ ಹಾಜರಾದರು. ಸಮಯವನ್ನು ವ್ಯರ್ಥಮಾಡಲಿಲ್ಲ.

ಅವರ ಪುತ್ರ ದಾಊದ್ ಸಾಹಿಬ್ ಬರೆಯುತ್ತಾರೆ: ಚೈನೀಸ್ ಜನರಿಗೆ ತಬ್ಲೀಗ್ ಮಾಡುವ ಉತ್ಸಾಹ ಅವರಿಗೆ ಬಹಳ ಇತ್ತು. ಅವರು ಭಾಗವಹಿಸುತ್ತಿದ್ದ ಕಾರ್ಯಕ್ರಮಗಳಲ್ಲಿ ಅಲ್ಲಿದ್ದ ಜನರಿಗೆ ಅಹ್ಮದಿಯತ್ತಿನ ಪರಿಚಯ ಮಾಡಿಕೊಡುತ್ತಿದ್ದರು ಮತ್ತು ಅಹ್ಮದಿಯಾ ಸಾಹಿತ್ಯ ಹಂಚುತ್ತಿದ್ದರು. ಕೊನೆಗೆ ಅವರು ವೀಲ್‌ಚೆಯರ್‌ನಲ್ಲಿ ಕಾರ್ಯಕ್ರಮಗಳಿಗೆ ಆಗಮಿಸುತ್ತಿದ್ದಾಗ ಸಹ ವೀಲ್‌ಚೆಯರ್‌ನ ಚೀಲಗಳಲ್ಲಿ ದೊಡ್ಡ ದೊಡ್ಡ ಗ್ರಂಥಗಳನ್ನು ಇರಿಸಲು ಹೇಳುತ್ತಿದ್ದರು– ಜನರಿಗೆ ವಿತರಣೆ ಮಾಡಲಿಕ್ಕೋಸ್ಕರ. ದಾಊದ್ ಸಾಹಿಬ್ ಹೇಳುತ್ತಾರೆ: ನಾನು ಬಾಲಕನಾಗಿದ್ದಾಗ ಯಾವಾಗಲಾದರೊಮ್ಮೆ ಅವರ ಕಚೇರಿಗೆ ಹೋಗಿದ್ದಾಗ ಪೆನ್ ಅಥವಾ ಪೆನ್ಸಿಲ್ ತೆಗೆದುಕೊಳ್ಳಲು ಪ್ರಯತ್ನಿಸಿದಾಗ ಕಚೇರಿಯಲ್ಲಿದ್ದ ಪೆನ್ ಮತ್ತು ಪೆನ್ಸಿಲ್ ಉಪಯೋಗಿಸಲು ಬಿಡುತ್ತಿರಲಿಲ್ಲ. ಅವರು ನನ್ನ ತಾಯಿಯವರೊಂದಿಗೆ ಹೇಳುತ್ತಿದ್ದರು ಅವನಿಗೆ ಪೆನ್ ಬೇಕಾಗಿದೆ, ಅವನಿಗೆ ಖರೀದಿಸಿ ಕೊಡಬೇಕು. ಯಾವಾಗಲಾದರೂ ಪೋಟೋಕಾಪಿ ಮಾಡಿಸಲು ಹೋದರೆ ಮನೆಯಿಂದ ಕಾಗದ ತರಲು ಹೇಳುತ್ತಿದ್ದರು. ಅಲ್ಲಾಹನ ಗುಣವಿಶೇಷಗಳನ್ನು ನೆನಪಿಸಲು ಅವರು ಉಪದೇಶಿಸುತ್ತಿದ್ದರು. ಅವರು ಚೀನೀ ಭಾಷೆಯಲ್ಲಿ ಅಲ್ಲಾಹನ ಒಂದುನೂರು ಗುಣಗಳನ್ನು ವರ್ಣಿಸುವ ಒಂದು ಪದ್ಯ ರಚಿಸಿದ್ದರು. ಅವರು ಈ ಪದ್ಯ ಪ್ರತಿದಿನ ರಾತ್ರಿ ಓದುತ್ತಿದ್ದರು. ನಾವು ಸಹೋದರ ಸಹೋದರಿಯರು ಅಲ್ಲಾಹನ ಗುಣ ವಿಶೇಷಗಳನ್ನು ಹೆಚ್ಚು ಹೆಚ್ಚಾಗಿ ನೆನಪಿಸುವ ಸ್ಪರ್ಧೆ ಸಹ ಮಾಡಿಸುತ್ತಿದ್ದರು. ಮತ್ತು ಬಹುಮಾನ ಕೊಡುತ್ತಿದ್ದರು.

ಆಗಾ ಸೈಫುಲ್ಲಾ ಸಾಹಿಬ್ ಅವರ ಕ್ಲಾಸ್ ಫೆಲೋ ಆಗಿದ್ದರು. ಅವರು ಬರೆಯುತ್ತಾರೆ: ಉಸ್ಮಾನ್ ಚೀನೀ ಸಾಹಿಬರು ತನ್ನ ಯೌವ್ವನ ಕಾಲದಲ್ಲಿ ದೇವಭಕ್ತಿಯುಳ್ಳವರೂ, ಉತ್ತಮ ಸ್ವಭಾವಗುಣ ಸಂಪನ್ನರೂ, ಉತ್ತಮ ವರ್ತನೆಯನ್ನು ಮಾಡುವವರೂ ಆಗಿದ್ದರು. ಅವರು ಬಹಳ ತನ್ಮಯರಾಗಿ ನಮಾಝ್ ಅನುಷ್ಠಿಸುತ್ತಿದ್ದರು. ಅತ್ಯಂತ ವಿನಯದಿಂದ ದುಆ ಮಾಡುತ್ತಿದ್ದರು. ಅವರು ನಫ್ಲ್ ಉಪವಾಸ ಮಾಡುತ್ತಿದ್ದರು. ನಫ್ಲ್ ನಮಾಝ್‌ಗಳನ್ನು ಅನುಷ್ಠಿಸುವ ಸ್ವಭಾವ ಹೊಂದಿದ್ದರು. ತಸ್‌ಬೀಹ್, ತಹ್‌ಮೀದ್ ಮತ್ತು ಝಿಕ್ರೆ ಇಲಾಹಿ ಬಗ್ಗೆ ಬಹಳ ಹೆಚ್ಚು ಆಸಕ್ತಿ ಹೊಂದಿದವರಾಗಿದ್ದರು. ಅಹ್ಮದಿಯ್ಯತ್ ಎಂಬ ಅನುಗ್ರಹ ದೊರೆತುದಕ್ಕೋಸ್ಕರ ಬಹಳ ಕೃತಜ್ಞತೆ ಪ್ರಕಟಿಸುತ್ತಿದ್ದರು. ಯಾವಾಗಲೂ ಪ್ರೀತಿ, ನಿಷ್ಠೆ ಮತ್ತು ಅರ್ಪಣೆಯ ಭಾವನೆಗಳನ್ನು ಪ್ರಕಟಿಸುವವರಾಗಿದ್ದರು. ನನ್ನ ವಿದ್ಯಾಭ್ಯಾಸದ ಕಾಲದಲ್ಲಿ ಹಝ್ರತ್ ಮೌಲವಿ ಗುಲಾಮ್ ರಸೂಲ್ ಸಾಹಿಬ್ ರಾಜೀಕಿ, ಹಝ್ರತ್ ಮೌಲವಿ ಅಬ್ದುಲ್ಲತ್ತೀಫ್ ಸಾಹಿಬ್ ಭಾವಲ್‌ಪುರಿ, ಸಾಹಿಬ್‌ಝಾದ ಸಯ್ಯಿದ್ ಅಬುಲ್ ಹಸನ್ ಸಾಹಿಬ್ ಮತ್ತು ಇನ್ನಿತರ ಹಿರಿಯರ ಸನ್ನಿಧಿಯಲ್ಲಿ ಕುಳಿತುಕೊಂಡು ನಮಗೋಸ್ಕರ ಪ್ರಾರ್ಥಿಸಲು ಹೇಳಿ ಪ್ರಾರ್ಥನೆಗಳು ಅಂಗೀಕಾರ ಗಳಿಸಿದ ಪರಿಣಾಮಗಳನ್ನು ಕಾಣುವ ಭಾಗ್ಯ ನಮಗೆ ಲಭಿಸಿತ್ತು. ನಾನು ಸಂಪೂರ್ಣವಾದ ಜಾಗರೂಕತೆಯಿಂದ ಸಾಕ್ಷ್ಯ ನೀಡುತ್ತೇನೆ, ಆರಾಧನೆಯಲ್ಲಿ ಅಳಲು, ಪ್ರಾರ್ಥನೆಯಲ್ಲಿ ವಿನಯಾನುಸರಣೆ, ಪ್ರಾರ್ಥನೆಗಳ ಅಂಗೀಕಾರ ಇವುಗಳಿಗೆ ಸಂಬಂಧಿಸಿ ಮೇಲೆ ಸೂಚಿಸಿದ ಹಿರಿಯರ ಪ್ರತಿಬಿಂಬ ಮುಹ್ತರಮ್ ಉಸ್ಮಾನ್ ಚೀನೀ ಸಾಹಿಬರಲ್ಲಿ ಅಸ್ತಿತ್ವದಲ್ಲಿ ಇತ್ತು. ನಾನು ಸ್ವತಃ ನನ್ನ ವೈಯಕ್ತಿಕ ವಿಷಯಗಳಿಗೆ ಸಂಬಂಧಿಸಿ ಅವರು ಮಾಡಿದ ದುಆಗಳು ಅಂಗೀಕಾರ ಪಡೆದುದನ್ನು ಕಂಡಿದ್ದೇನೆ. ಅವರು ಬಹಳ ಬುದ್ಧಿಶಾಲಿಯೂ ಸತ್ಯವಿಶ್ವಾಸಿಯಲ್ಲಿರಬೇಕಾದ ಸೂಕ್ಷ್ಮಜ್ಞಾನದ ಮಾಲಿಕರೂ ಆಗಿದ್ದರು. ಜಮಾಅತಿನ ನಿಝಾಮ್‌ಗೆ ಸಂಬಂಧಿಸಿ ತಮ್ಮ ಅಭಿಪ್ರಾಯ ಪ್ರಕಟಿಸುವ ಬಗ್ಗೆ ಅತ್ಯಂತ ಜಾಗರೂಕತೆ ವಹಿಸುವವರಾಗಿದ್ದರು. ಅವರು ಜಮಾಅತಿನ ನಿಝಾಮನ್ನು ಪರಿಪೂರ್ಣವಾಗಿ ಅನುಸರಿಸುವವರಾಗಿದ್ದರು. ತಮ್ಮ ಸ್ನೇಹಿತರೊಂದಿಗೂ ಸಂದರ್ಶಕರೊಂದಿಗೂ ಅನುಸರಣೆ ಬಗ್ಗೆ ಯಾವಾಗಲೂ ಉಪದೇಶಿಸುತ್ತಿದ್ದರು. ಖಿಲಾಫತ್ ಬಗ್ಗೆ ಪರಿಪೂರ್ಣ ಆಧ್ಯಾತ್ಮಿಕ ಗೌರವ ಪ್ರಕಟಿಸುವವರಾಗಿದ್ದರು. ಖಿಲಾಫತ್‌ನ ಅನುಗ್ರಹಗಳ ಬಗ್ಗೆ ಕೃತಜ್ಞತೆ ಪ್ರಕಟಿಸುತ್ತಿದ್ದರು. ಅವರೊಂದಿಗೆ ಯಾರಾದರೂ ಪ್ರಾರ್ಥನೆಗೆ ಅಪೇಕ್ಷಿಸಿದಾಗ ಅವರು ಕೇಳುತ್ತಿದ್ದರು ಖಲೀಫರಿಗೆ ಸಹ ಪ್ರಾರ್ಥಿಸಲು ಅಪೇಕ್ಷೆ ಸಲ್ಲಿಸಿರುವಿರೋ ಎಂದು.

ರಶೀದ್ ಹರ್ಷದ್ ಸಾಹಿಬ್ ಹೇಳುತ್ತಾರೆ: ಅವರೊಂದಿಗೆ ಮೂವತ್ತೈದು ವರ್ಷಗಳಷ್ಟು ಕಾಲ ಕೆಲಸ ಮಾಡುವ ಸಂದರ್ಭ ನನಗೆ ಲಭಿಸಿತ್ತು. ನಮಾಝ್ ಬಾಜಮಾಅತ್ ಅನುಷ್ಠಾನದ ಬಗ್ಗೆ, ಕ್ರಮ ಬದ್ಧತೆ ಮತ್ತು ಆರಾಧನೆಯಲ್ಲಿ ಅವರ ಆಸಕ್ತಿ ನಮಗೆ ಉತ್ತಮ ಮಾದರಿಯಾಗಿತ್ತು. ಮಳೆ ಸುರಿಯುತ್ತಿದ್ದಾಗಲೂ, ಬಿರುಗಾಳಿ ಬೀಸುತ್ತಿದ್ದಾಗಲೂ, ಮಂಜುಗಡ್ಡೆ ಸುರಿಯುತ್ತಿದ್ದಾಗಲೂ ಅವರು ತಪ್ಪದೆ ಬಾಜಮಾಅತ್ ನಮಾಝ್‌ಗೆ ಮಸ್‌ಜಿದ್‌ಗೆ ಆಗಮಿಸುತ್ತಿದ್ದರು. ತಬ್ಲೀಗ್ ಮಾಡುವ ಬಗ್ಗೆ ಅವರಿಗೆ ಬಹಳ ಉತ್ಸಾಹವಿತ್ತು.

ಸಾಮಾನ್ಯವಾಗಿ ಮೌನವಾಗಿರುವವರೂ ಕಡಿಮೆ ಮಾತನಾಡುವವರೂ ಆಗಿದ್ದರು. ಆದರೆ ತಬ್ಲೀಗ್ ಮಾಡುವಾಗ ಅವರಲ್ಲಿ ಅಸಾಧಾರಣ ಶಕ್ತಿ ಮತ್ತು ಉತ್ಸಾಹ ತಲೆದೋರುತ್ತಿತ್ತು. ಅವರು ಅನೇಕ ಗಂಟೆಗಳ ಕಾಲ ಮಾತನಾಡುತ್ತಿದ್ದರು.

ನಸೀರ್ ಅಹ್ಮದ್ ಬದರ್ ಸಾಹಿಬ್, ಮುರಬ್ಬಿ ಬರೆಯುತ್ತಾರೆ: ಅವರು ಬಿಟ್ಟು ಹೋದ ಚೀನೀ ಭಾಷೆಯ ಸಾಹಿತ್ಯ ಅವರಿಗೆ ಸ್ಮಾರಕವಾಗಿದೆ. ಅದು ಅವರನ್ನು ಮೃತವಾಗಲು ಬಿಡಲಾರದು. ಅವರು ರಚಿಸಿದ ಚೀನೀ ಭಾಷೆಯ ಹಲವಾರು ಗ್ರಂಥಗಳೂ ಭಾಷಾಂತರ ಕೃತಿಗಳೂ ಇವೆ. ಅವರು ಅವುಗಳನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ರೂಹಾನೀ ಖಝಾಇನ್‌ನಿಂದ ಆಯ್ಕೆ ಮಾಡಿ ಭಾಷಾಂತರಿಸಿ ಜನರಿಗೆ ತಲಪಿಸಿದವುಗಳಾಗಿವೆ.

ಝಫರುಲ್ಲಾ ಸಾಹಿಬ್ ಹೇಳುತ್ತಾರೆ: ಇಸ್ಲಾಮಾಬಾದ್‌ನಿಂದ ರಬ್ವದ ಕಡೆಗೆ ಪ್ರಯಾಣ ಮಾಡುತ್ತಾ ಇದ್ದಾಗ ಕಲರ್ ಕಹಾರ್ ಪ್ರದೇಶದಲ್ಲಿ ನನ್ನನ್ನು ಕರೆದುಕೊಂಡು ಹೋಗಿ ಅವರು ಜಾಮಿಅದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಧ್ಯಾನಾಸಕ್ತರಾಗಿ ಕುಳಿತುಕೊಳ್ಳುತ್ತಿದ್ದ ಸ್ಥಳವನ್ನು ನನಗೆ ತೋರಿಸಿಕೊಟ್ಟರು.

ಹುಝೂರ್ ಹೇಳಿದರು: ನನಗೆ ಸಹ ನೆನಪಿದೆ, ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರ ಕಾಲದಲ್ಲಿ ನಾವು ಚಿಕ್ಕ ಮಕ್ಕಳಾಗಿದ್ದಾಗ ನಾನು ಸಹ ಒಮ್ಮೆ ಆ ಸ್ಥಳಕ್ಕೆ ಹೋಗಿದ್ದೆ. ಅಲ್ಲಿ ಒಂದು ಚಿಕ್ಕ ಕೋಣೆಯಲ್ಲಿ ಚೀನೀ ಸಾಹಿಬರು ಕೈಯಲ್ಲಿ ಪವಿತ್ರ ಖುರ್‌ಆನ್ ಹಿಡಿದುಕೊಂಡು ಪ್ರಾರ್ಥನೆ ಮಾಡುತ್ತಿದ್ದುದಾಗಿ ಕಂಡೆನು. ಅವರೊಂದಿಗೆ ನಾವು ಮಕ್ಕಳು ಮತ್ತು ದೊಡ್ಡವರು ಪ್ರಾರ್ಥಿಸಲು ಅಪೇಕ್ಷಿಸಿದೆವು. ಅವರು ಮುಗುಳು ನಗುತ್ತಾ ಉತ್ತರ ನೀಡುತ್ತಿದ್ದರು. ಬಹಳ ವಾತ್ಸಲ್ಯವನ್ನು ಪ್ರಕಟಿಸುತ್ತಿದ್ದರು.

ಡಾಕ್ಟರ್ ನೂರಿ ಸಾಹಿಬರು ಬರೆಯುತ್ತಾರೆ: 2004ರಲ್ಲಿ ನಾನು ಅವರ ಚೆಕ್‌ಅಪ್ ಮಾಡಿದ್ದೆ. ಹದಿನಾಲ್ಕು ಹದಿನೈದು ವರ್ಷಗಳ ಹಿಂದೆ. ಅವರಿಗೆ ಹೃದ್ರೋಗವಿದೆ ಎಂದು ತಪಾಸಣೆಯಲ್ಲಿ ತಿಳಿದಿತ್ತು. ಇಂತಹ ಜನರು ಬದುಕಿ ಬಾಳುವುದರ ಬಗ್ಗೆ ಬಹಳ ಕಡಿಮೆ ಪ್ರತೀಕ್ಷೆ ಇತ್ತು. ನನಗೆ ಆಶ್ಚರ್ಯವಾಗುತ್ತದೆ ಅವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ತಮ್ಮ ರೋಗಬಾಧೆ ತಡೆಯೊಡ್ಡಲು ಬಿಡಲಿಲ್ಲ. ಅವರು ಯಾವಾಗಲೂ ಕಾರ್ಯನಿರತರಾಗಿರುತ್ತಿದ್ದರು. ಅತಾಉಲ್ ಮುಜೀಬ್ ರಾಶಿದ್ ಸಾಹಿಬರು ಬರೆಯುತ್ತಾರೆ: ಅವರು ಬಹಳ ದುಆ ಮಾಡುವವರೂ ದುಆಗಳ ಅಂಗೀಕಾರ ಗಳಿಸುವ ಹಿರಿಯರೂ ಆಗಿದ್ದರು. ಅವರು ನಮಾಝ್‌ಗಳ ಬಗ್ಗೆ ಬಹಳ ಬದ್ಧತೆಯುಳ್ಳವರಾಗಿದ್ದರು. ರೋಗಾವಸ್ಥೆಯಲ್ಲಿಯೂ ಬಲಹೀನರಾಗಿದ್ದಾಗಲೂ ಮಸ್‌ಜಿದ್‌ಗೆ ಹೋಗುತ್ತಿದ್ದ ಬಹಳ ಸಾತ್ವಿಕರೂ ದೇವ ಭಯವುಳ್ಳವರೂ ಯಾರಿಗೂ ಹಾನಿಯುಂಟು ಮಾಡದವರೂ ಆಗಿದ್ದರು. ಅವರು ಪ್ರತಿಯೊಬ್ಬರಿಗೆ ಶುಭ ಹಾರೈಸುವವರಾಗಿದ್ದರು. ಉತ್ತಮ ಸಲಹೆ ನೀಡುವವರಾಗಿದ್ದರು. ಬಹಳ ಸರಳ ಸ್ವಭಾವದ ಆಡಂಬರ ರಹಿತ ಮನುಷ್ಯನಾಗಿದ್ದರು. ಅತಿಥಿ ಸತ್ಕಾರ ಪ್ರಿಯರೂ ಪ್ರೀತಿಯಿಂದ ಒತ್ತಾಯ ಪೂರ್ವಕ ಅತಿಥಿ ಸತ್ಕಾರ ಮಾಡುವವರೂ ಆಗಿದ್ದರು. ಅವರು ಬಹಳ ಉನ್ನತ ಧೈರ್ಯಶಾಲಿಯಾಗಿದ್ದರು. ಅವರು ಬಲಹೀನರಾಗಿದ್ದಾಗಲೂ ಧಾರ್ಮಿಕ ಸೇವೆಯಲ್ಲಿ ನಿರತರಾಗುವವರಾಗಿದ್ದರು. ಅವರು ನಿಷ್ಠೆಯಿಂದಲೂ ಪರಿಶ್ರಮದೊಂದಿಗೂ ಪ್ರೀತಿಯಿಂದಲೂ ತಮ್ಮ ಕರ್ತವ್ಯ ನಿರ್ವಹಿಸುವವರಾಗಿದ್ದರು. ಧಾರ್ಮಿಕ ಸೇವೆ ಮಾಡುತ್ತಾ ಮುಂದುವರಿಯುವ ಒಂದು ಹಂಬಲ ಅವರಿಗಿತ್ತು. ಅವರು ಅಹ್ಮದಿಯಾ ಖಿಲಾಫತಿನ ತೋರಿಕೆ ರಹಿತ ನಿಷ್ಠಾವಂತ ಸೇವಕರಾಗಿದ್ದರು. ಅವರು ಯಾವಾಗಲೂ ನಗು ಮುಖದಿಂದ ಸ್ವಾಗತಿಸುವವರೂ ಅಸಂಖ್ಯಾತ ವೈಶಿಷ್ಟ್ಯಗಳನ್ನು ಹೊಂದಿದವರೂ ಆಗಿದ್ದರು.

ಅಲ್ಲಾಹನು ಚೀನೀ ಸಾಹಿಬರ ಆಧ್ಯಾತ್ಮಿಕ ಪದವಿಯನ್ನು ಉನ್ನತ ಗೊಳಿಸುತ್ತಾ ಇರಲಿ. ಅವರ ಪತ್ನಿಗೆ ಸಹನೆ ಮತ್ತು ಧೈರ್ಯ ದಯಪಾಲಿಸಲಿ ಮತ್ತು ಅವರ ಸಂರಕ್ಷಕನೂ ಸಹಾಯಕನೂ ಆಗಲಿ. ಅವರ ಮಕ್ಕಳನ್ನೂ ಅವರ ಪ್ರಾರ್ಥನೆಗಳ ಮತ್ತು ಒಳಿತುಗಳ ವಾರೀಸುದಾರರನ್ನಾಗಿ ಮಾಡಲಿ. ಅವರ ಹೆಜ್ಜೆ ಗುರುತುಗಳಲ್ಲಿ ಮಕ್ಕಳು ನಡೆಯುವವರಾಗಲಿ – ಆಮೀನ್. ನಾನು ಜುಮುಅ ನಮಾಝ್ ನಂತರ ಅವರ ನಮಾಝೆ ಜನಾಝು ಸಹ ನಿರ್ವಹಿಸುವೆನು.

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. On 27-04-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon